ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ

**Directorate of Medical Education.**

ಆನಂದರಾವ್ ವೃತ್ತ, ಬೆಂಗಳೂರು-9
Ananda Rao Circle, Bangalore-9
email: dmekarnataka@yahoo.com

ಸಂಖ್ಯೆ: ವೈಶಿನಿ/ಎನ್‌ಆರ್‌ಸಿ(1)/23/2018-19 ದಿನಾಂಕ: 27-07-2018

## -:ಅಧಿಸೂಚನೆ:-

**ವಿಷಯ:-** 2018-19 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯಗಳಿಗೆ ಎರಡು ವರ್ಷಗಳ ಅವಧಿಯ ಪಿ.ಬಿ.ಬಿ.ಎಸ್ಸಿ ನರ್ಸಿಂಗ್ ವ್ಯಾಸಂಗಕ್ಕೆ ಸೇವಾನಿರತ ಅರ್ಹ ಶುಶ್ರೂಷಕರುಗಳಿಂದ ಅರ್ಜಿ ಆಹ್ವಾನಿಸುವ ಬಗ್ಗೆ.

* * * * *

2018--19 ನೇ ಸಾಲಿನ ಶೈಕ್ಷಣಿಕ ವರ್ಷಕ್ಕಾಗಿ ಅರ್ಹ ಸೇವಾನಿರತ ಶುಶ್ರೂಷಕರುಗಳಿಂದ ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯಗಳಿಗೆ ಎರಡು ವರ್ಷಗಳ ಪಿ.ಬಿ.ಬಿ.ಎಸ್ಸಿ ನರ್ಸಿಂಗ್ ವ್ಯಾಸಂಗಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2. ಪಿ.ಬಿ.ಬಿ.ಎಸ್ಸಿ (ನ) ವ್ಯಾಸಂಗಕ್ಕೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕೆಳಕಂಡ ಈ ಅರ್ಹತೆಯನ್ನು ಹೊಂದಿರತಕ್ಕದ್ದು.

ಅ) ಅಭ್ಯರ್ಥಿಗಳು ಜನರಲ್ ನರ್ಸಿಂಗ್ ಅಂಡ್ ಮಿಡ್‌ವೈಫರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು.
ಆ) ನೊಂದಾಯಿತ ದಾದಿಯಾಗಿರತಕ್ಕದ್ದು / ಆರೋಗ್ಯ ಸಂದರ್ಶಕಿಯಾಗಿರತಕ್ಕದ್ದು.
ಇ) ಕನಿಷ್ಟ 5 ವರ್ಷಗಳ ಸೇವೆ ಪೂರ್ಣಗೊಳಿಸಿರಬೇಕು ಹಾಗೂ ಖಾಯಂ ಪೂರ್ವಾವಧಿ ಘೋಷಣೆಯಾಗಿರಬೇಕು.
ಈ) ಕರ್ನಾಟಕ ರಾಜ್ಯದ ಯಾವುದೇ ವಿಶ್ವವಿದ್ಯಾನಿಲಯದಿಂದ ಅಂಗೀಕೃತವಾದ ಕಲೆ, ವಾಣಿಜ್ಯ ಅಥವಾ ವಿಜ್ಞಾನ ವಿಭಾಗದಲ್ಲಿ ದ್ವಿತೀಯ ಪಿ.ಯು.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು.
ಉ) 48 ವರ್ಷ ವಯಸ್ಸು ಮೀರಿರಬಾರದು.
ಊ) ಉತ್ತಮ ಸೇವಾ ವೃತ್ತಿ ಹಾಗೂ ಸೇವಾ ದಾಖಲೆಗಳನ್ನು ಹೊಂದಿರತಕ್ಕದ್ದು.
ಋ) ಈ ಹಿಂದೆ ಉನ್ನತ ವ್ಯಾಸಂಗಕ್ಕಾಗಿ ನಿಯೋಜಿಸಲ್ಪಟ್ಟಿದ್ದಲ್ಲಿ ವ್ಯಾಸಂಗದ ಅವಧಿ ಮುಗಿದ ನಂತರ ನಿಯಮಾವಳಿ ಪ್ರಕಾರ ಬಾಂಡ್ ಅವಧಿಯನ್ನು ಪೂರೈಸಿರತಕ್ಕದ್ದು.
ಎ) ವ್ಯಾಸಂಗದ ಅವಧಿಯಲ್ಲಿ ಶುಶ್ರೂಷಕರು ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ ದೀರ್ಘಾವಧಿ ರಜೆಯನ್ನು ಪಡೆಯುವುದಿಲ್ಲವೆಂದು ಸ್ವಯಂ ಘೋಷಣೆ ನೀಡತಕ್ಕದ್ದು.
ಏ) ಶಿಕ್ಷಣಾರ್ಥಿಗಳ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಬಾಕಿ ಇಲ್ಲವೆಂದು ನೇಮಕಾತಿ ಪ್ರಾಧಿಕಾರದಿಂದ ದೃಢೀಕರಣ ಪತ್ರ ಸಲ್ಲಿಸುವುದು.

3. ಪಿ.ಬಿ.ಬಿ.ಎಸ್ಸಿ (ನ) ವ್ಯಾಸಂಗಕ್ಕೆ ಅರ್ಜಿ ಸಲ್ಲಿಸಲು ಇಚ್ಛಿಸುವ ಸೇವಾನಿರತ ಶುಶ್ರೂಷಕರು ನಿಗದಿತ ಅರ್ಜಿಯನ್ನು ಪ್ರಾಂಶುಪಾಲರ ಕಛೇರಿ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಬೆಂಗಳೂರು, ಹಾಸನ, ಹೊಳೆನರಸೀಪುರ ಕಿದ್ವಾಯಿ ಸ್ಮಾರಕ ಗ್ರಂಥಿ, ಬೆಂಗಳೂರು ಮತ್ತು ಹುಬ್ಬಳ್ಳಿ, ಇಲ್ಲಿ **ದಿನಾಂಕ: 30-07-2018 ರಿಂದ 16-08-2018** ರವರೆಗೆ ಬೆಳಿಗ್ಗೆ 10.30 ರಿಂದ ಸಂಜೆ 4.30 ಗಂಟೆಯವರೆಗೆ ಕಛೇರಿ ವೇಳೆಯಲ್ಲಿ ರೂ. 200/- ನಗದು ಪಾವತಿ ಮಾಡಿ ಪಡೆಯಬಹುದಾಗಿದೆ.

. . . . .2

30/7/18

4. ಅಭ್ಯರ್ಥಿಯು ಭರ್ತಿ ಮಾಡಿದ ಅರ್ಜಿಯನ್ನು ಕಂಡಿಕೆ (2) ರಲ್ಲಿನ ಪ್ರಮಾಣ ಪತ್ರಗಳ ದೃಢೀಕರಣ ಪ್ರತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಿ ನೇಮಕಾತಿ ಪ್ರಾಧಿಕಾರದ ಅನಾಕ್ಷೇಪಣಾ ಪತ್ರದೊಂದಿಗೆ (NOC) ಸದಸ್ಯ ಕಾರ್ಯದರ್ಶಿಗಳು ಹಾಗೂ ಪ್ರಾಂಶುಪಾಲರು, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ, ಕೋಟೆ, ಬೆಂಗಳೂರು ಇವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕವಾಗಲಿ (SPEED POST) **<u>ದಿನಾಂಕ: 20-08-2018ರ</u>** ಸಂಜೆ ನಾಲ್ಕು ಗಂಟೆಯೊಳಗಾಗಿ ತಲುಪವಂತೆ ಸಲ್ಲಿಸತಕ್ಕದ್ದು.

ನಿಗಧಿತ ದಿನಾಂಕದ ನಂತರ ಬರುವ ಅರ್ಜಿಗಳನ್ನು ಯಾವ ಕಾರಣವನ್ನು ನೀಡದೆ ಒಟ್ಟಾರೆ ತಿರಸ್ಕರಿಸಲಾಗುವುದು.

**ಈ ಕೆಳಕಂಡ ಇಲಾಖೆಗಳ ಸೇವಾನಿರತ ಶುಶ್ರೂಷಕರಿಗೆ ಮೀಸಲಿಟ್ಟಿರುವ ಸ್ಥಾನಗಳು**

| | | |
|---|---|---|
| ಅ) | ವಿಶ್ವ ಆರೋಗ್ಯ ಸಂಸ್ಥೆ, ನವದೆಹಲಿ ಇವರು ನಿಯೋಜಿಸುವ ವಿದೇಶಿ ಅರ್ಜಿದಾರರಿಗೆ | 05 ಸ್ಥಾನಗಳು |
| ಆ) | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಕಾರ್ಯ ನಿರ್ವಹಿಸುತ್ತಿರುವ ಸಾಮಾನ್ಯ ಶುಶ್ರೂಷ ತರಬೇತಿಯನ್ನು ಹೊಂದಿರುವ ಮಹಿಳಾ ಆರೋಗ್ಯ ಸಂದರ್ಶಕಿಯರಿಗೆ | 05 ಸ್ಥಾನಗಳು |

ಮೇಲ್ಕಂಡ (ಅ) ಮತ್ತು (ಆ) ಸ್ಥಾನಗಳಿಗೆ ಅಭ್ಯರ್ಥಿಗಳು ಇಲ್ಲವಾಗಿ ಸ್ಥಾನಗಳು ಖಾಲಿ ಇದ್ದಲ್ಲಿ ಸದರಿ ಸ್ಥಾನಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ / ವೈದ್ಯಕೀಯ ಶಿಕ್ಷಣ ಇಲಾಖೆಯ ಅರ್ಜಿದಾರರಿಂದ ಭರ್ತಿ ಮಾಡಲಾಗುವುದು.

**ನಿರ್ದೇಶಕರು, ವೈದ್ಯಕೀಯ ಶಿಕ್ಷಣ.**

**<u>ಪ್ರತಿಯನ್ನು ಈ ಕೆಳಕಂಡವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ:-</u>**

1. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು-9.
2. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು-9.
3. ನಿರ್ದೇಶಕರು, ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) ರಾಜಾಜಿನಗರ, ಬೆಂಗಳೂರು.
4. ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.
5. ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
6. ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ, ಡಾ॥. ಎಂ. ಹೆಚ್. ಮರಿಗೌಡ ರಸ್ತೆ, ಬೆಂಗಳೂರು-29.
7. ನಿರ್ದೇಶಕರು, ಕರ್ನಾಟಕ ವೈದ್ಯಕೀಯ ವಿಜ್ಞಾಗಳ ಸಂಸ್ಥೆ, ಹುಬ್ಬಳ್ಳಿ.
8. ನಿರ್ದೇಶಕರು, ಎಸ್.ಡಿ.ಎಸ್. ಕ್ಷಯ ರೋಗ ಸಂಶೋಧನಾ ಕೇಂದ್ರ ಮತ್ತು ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆ, ಸೋಮೇಶ್ವರ ನಗರ, 1ನೇ ಮುಖ್ಯರಸ್ತೆ, ಧರ್ಮರಾಂ ಕಾಲೇಜು ಅಂಚೆ (ನಿಮ್ಹಾನ್ಸ್ ಹತ್ತಿರ), ಬೆಂಗಳೂರು-29.
9. ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಇಂಡಿಯನ್ ಎಕ್ಸ್‌ಪ್ರೆಸ್ ಹತ್ತಿರ, ಬೆಂಗಳೂರು-1 ಇವರಿಗೆ ಮೇಲಿನ ಅಧಿಸೂಚನೆಯನ್ನು ಕಳುಹಿಸುತ್ತಾ, ರಾಜ್ಯದ ದೈನಂದಿನ ಕನ್ನಡ ದಿನಪತ್ರಿಕೆಗಳಲ್ಲಿ ಪ್ರಕಟಿಸುವಂತೆ ಹಾಗೂ ಪ್ರಕಟಿಸಲಾದ ದಿನಪತ್ರಿಕೆಗಳನ್ನು ಈ ನಿರ್ದೇಶನಾಲಯಕ್ಕೆ ಕಳುಹಿಸುವಂತೆ ಕೋರಲಾಗಿದೆ.
10. ನಿಲಯದ ನಿರ್ದೇಶಕರು, ಆಕಾಶವಾಣಿ ರಾಜ್ಯಭವನ ರಸ್ತೆ, ಬೆಂಗಳೂರು-1 ಇವರಿಗೆ ಈ ವಿಷಯವನ್ನು ಆಕಾಶವಾಣಿಯಲ್ಲಿ ಪ್ರಸಾರ ಮಾಡಲು ಕೋರಲಾಗಿದೆ.

11. ನಿರ್ದೇಶಕರು, ದೂರದರ್ಶನ ಕೇಂದ್ರ, ಚಾಮರಾಜೇಂದ್ರನಗರ, ಬೆಂಗಳೂರು ಇವರು ಈ ವಿಷಯವನ್ನು ದೂರದರ್ಶನದಲ್ಲಿ ಪ್ರಸಾರ ಮಾಡಲು ಕೋರಲಾಗಿದೆ.
12. ರಿಜಿಸ್ಟ್ರಾರ್, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿದ್ಯಾಲಯ, ಜಯನಗರ 'ಟಿ' ಬ್ಲಾಕ್, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
13. **ವೈದ್ಯಕೀಯ ಅಧೀಕ್ಷಕರು / ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ,** ವಿಕ್ಟೋರಿಯ ಆಸ್ಪತ್ರೆ / ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಬೆಂಗಳೂರು / ಕೆ.ಆರ್. ಆಸ್ಪತ್ರೆ ಮೈಸೂರು / ಜಿಲ್ಲಾ ವೆನ್‌ಲಾಕ್ ಆಸ್ಪತ್ರೆ, ಮಂಗಳೂರು / ಸಿ.ಜಿ.ಆಸ್ಪತ್ರೆ, ದಾವಣಗೆರೆ / ತುಮಕೂರು / ಬೆಳಗಾಂ / ಬಿಜಾಪುರ / ಬಳ್ಳಾರಿ / ಚಿತ್ರದುರ್ಗಾ / ಗುಲ್ಬರ್ಗ / ಹಾವೇರಿ / ರಾಮನಗರ / ಚಿಕ್ಕಬಳ್ಳಾಪುರ / ಕೋಲಾರ / ಶಿವಮೊಗ್ಗ / ಮಂಡ್ಯ / ಹಾಸನ / ಮಡಿಕೇರಿ / ಉಡುಪಿ / ಚಿಕ್ಕಮಗಳೂರು / ಕಾರವಾರ / ಯಾದಗಿರಿ / ರಾಯಚೂರು / ಬೀದರ್ / ಬಾಗಲಕೋಟೆ / ಕೊಪ್ಪಳ / ಗದಗ / ಚಾಮರಾಜನಗರ / ಧಾರವಾಡ ಇವರುಗಳು ಸದರಿ ಅಧಿಸೂಚನೆಯನ್ನು ತಮ್ಮ ಕಛೇರಿಯ ಸೂಚನಾಫಲಕದಲ್ಲಿ ಪ್ರಕಟಿಸುವಂತೆ ಕೋರಿದೆ.
14. **ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು,** ಬೆಂಗಳೂರು ನಗರ ಜಿಲ್ಲೆ / ಬೆಂಗಳೂರು ಗ್ರಾಮಾಂತರ ಜಿಲ್ಲೆ / ರಾಮನಗರ / ಚಿಕ್ಕಬಳ್ಳಾಪುರ / ತುಮಕೂರು / ಕೋಲಾರ / ದಾವಣಗೆರೆ / ಚಿತ್ರದುರ್ಗ / ಶಿವಮೊಗ್ಗ / ಮೈಸೂರು / ಮಂಡ್ಯ / ಹಾಸನ / ಮಡಿಕೇರಿ / ಮಂಗಳೂರು / ಉಡುಪಿ / ಚಿಕ್ಕಮಗಳೂರು / ಕಾರವಾರ / ರಾಯಚೂರು / ಬೀದರ್ / ಬಳ್ಳಾರಿ / ಗುಲ್ಬರ್ಗಾ / ಯಾದಗಿರಿ / ಬೆಳಗಾಂ / ಬಿಜಾಪುರ / ಬಾಗಲಕೋಟೆ / ಕೊಪ್ಪಳ / ಗದಗ / ಹಾವೇರಿ / ಚಾಮರಾಜನಗರ / ಧಾರವಾಡ ಇವರುಗಳು ಸದರಿ ಅಧಿಸೂಚನೆಯನ್ನು ತಮ್ಮ ಕಛೇರಿಯ ಸೂಚನಾಫಲಕದಲ್ಲಿ ಪ್ರಕಟಿಸುವುದರ ಜೊತೆಗೆ ನಿಯಮಗಳಲ್ಲಿ ಅವಕಾಶವಿದ್ದಲ್ಲಿ ಸದರಿ ಅಧಿಸೂಚನೆಯನ್ನು ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಿಸುವಂತೆ ಕೋರಿದೆ. (ಸದರಿ ಅಧಿಸೂಚನೆಯನ್ನು ತಾಲ್ಲೂಕು ಆಸ್ಪತ್ರೆ / ಕಛೇರಿಗಳ ಸೂಚನಾಫಲಕದಲ್ಲಿ ಪ್ರಕಟಿಸುವಂತೆ ಸೂಚಿಸುವುದು)
15. **ಪ್ರಾಂಶುಪಾಲರು,** ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ, ಕೋಟೆ, ಬೆಂಗಳೂರು / ಹಾಸನ / ಹೊಳೆನರಸೀಪುರ / ಕಿದ್ವಾಯಿ ಸ್ಮಾರಕ ಗ್ರಂಥಿ, ಬೆಂಗಳೂರು / ಕೆ.ಎಂ.ಸಿ ಆಸ್ಪತ್ರೆ, ಹುಬ್ಬಳ್ಳಿ.
16. ಕಛೇರಿ ಪ್ರತಿ.